**2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.**

**ಓ ಎಸ್ ನಂ.769-2013** **ಪಿ . ಡಬ್ಲ್ಯು: 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಸಾಕಮ್ಮ<br>ಪಿ.ಮರಳ್ಳಿ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ** 19-09-2024. |

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ ಎನ್.ಎಸ್  ವಕೀಲರಿಂದ:**

2. ನಾನು ಮದುವೆಯಾದ ನಂತರ ಸುಮಾರು 20 ವರ್ಷಗಳ ಕಾಲ ಪಿ.ಮರಳ್ಳಿಯಲ್ಲಿ ಇದ್ದು, ನಂತರ ಸುಮಾರು 8 ವರ್ಷಗಳ ಕಾಲ ಚಾಮರಾಜ ನಗರದ ಉತ್ತುವಳ್ಳಿ ಗ್ರಾಮದ ತೋಟದಲ್ಲಿ ವಾಸವಿದ್ದೆವು. ನನಗೆ ಕ್ರಯ ಮಾಡಿದ್ದ ಗುರುಸಿದ್ಧಮ್ಮ ರವರ ಕುಟುಂಬದವರು ನನಗೆ ಗೊತ್ತು. ನಮ್ಮ ಮನೆ ಮತ್ತು ಅವರು ಮನೆ ಸುಮಾರು ದೂರದಲ್ಲಿ ಇರುತ್ತದೆ. ನಾನು ದಿ.31-10-1975 ರಲ್ಲಿ ಕ್ರಯಪತ್ರದಲ್ಲಿ ನಮೂದಾಗಿರುವ ಸ್ವತ್ತನ್ನು ಕ್ರಯಕ್ಕೆ ಪಡೆದಾಗ ನನಗೆ 21 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ಸದರಿ ಕ್ರಯ ಪತ್ರದಲ್ಲಿ ನಮೂದಾಗಿರುವ ಸ್ವತ್ತು ರಾಮಶೆಟ್ಟಿಪುರದ ಸರ್ವೇ ನಂ.36 ವಿಸ್ತೀರ್ಣ 2 ಎಕರೆ ಎಂದರೆ ಸರಿ. ನಾನು ಕ್ರಯ ಪತ್ರದಲ್ಲಿ  ಬರೆಸಿರುವ ಚೆಕ್ಕುಬಂದಿಯೂ ದಿ.31-10-1975 ರ ಕ್ರಯ ಪತ್ರದಲ್ಲಿ ನಮೂದಾಗಿರುವ ಚೆಕ್ಕುಬಂದಿಯಾಗಿರುತ್ತದೆ ಎಂದರೆ ಸರಿ.  ನಾನು ಕ್ರಯಕ್ಕೆ ಪಡೆದ ಸಮಯದಿಂದ, ನಾನು ದಾವಾ ಸಲ್ಲಿಸುವವರೆವಿಗೂ ದಿ.31-10-1975 ರ ಕ್ರಯ ಪತ್ರದ ಚೆಕ್ಕುಬಂದಿಯಲ್ಲಿ ನಮೂದಿಸಿರುವ ಆಜುಬಾಜುದಾರರೇ ಆಗಲೂ ಸಹ ಇದ್ದರು. ದಿ.31-10-1975 ರ ಕ್ರಯ ಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂದಿ ಮತ್ತು ನನ್ನ ದಾವಾದಲ್ಲಿ ನಮೂದಿಸಿರುವ ಚೆಕ್ಕುಬಂದಿ ಸುಳ್ಳಾಗಿರುತ್ತದೆ ಎಂದರೆ ಸರಿಯಲ್ಲ.   ನಾನು ಕ್ರಯ ಪತ್ರದಲ್ಲಿ ಬರೆಸಿರುವ ಗುರುಸಿದ್ಧಮ್ಮ ಉ ಸಿದ್ಧಮ್ಮ

ಎಂಬ ಹೆಸರಿನ ವ್ಯಕ್ತಿ ಯಾರು ಇರುವುದಿಲ್ಲ ಎಂದರೆ ಸರಿಯಲ್ಲ. ಈಗ ಹಾಲಿ ಸರ್ವೇ ನಂ.38 ರ ಪೂರ್ವಕ್ಕೆ:-ಶಿವರುದ್ರಪ್ಪನವರ ಮಗ ಮಹದೇವಸ್ವಾಮಿ ರವರು ಸ್ವತ್ತು, ಪಶ್ಚಿಮಕ್ಕೆ:-ದೊರೆಸ್ವಾಮಿ ರವರ ಸ್ವತ್ತು, ದಕ್ಷಿಣಕ್ಕೆ:-ಪುಟ್ಟಲಿಂಗಮ್ಮ ರವರ ಸ್ವತ್ತು ಮತ್ತು ಉತ್ತರಕ್ಕೆ:- ಮಹೇಶ ರವರು ಸ್ವತ್ತು ಇರುತ್ತದೆ ಎಂದರೆ ಸರಿಯಲ್ಲ.

3. ಗುರುಸಿದ್ಧಮ್ಮ ನವರು ನನಗೆ ಕ್ರಯ ಮಾಡಿರುವ ಸ್ವತ್ತು ಅವರಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಸರ್ವೇ ನಂ.36 ರ ಪಹಣಿ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಕ್ರಯ ಪತ್ರದಲ್ಲಿ ನಮೂದಾಗಿರುವ ಸರ್ವೆ ನಂ.36 ವಿಸ್ತೀರ್ಣ 1 ಎಕರೆ 16 ಗುಂಟೆ ಇರುತ್ತದೆ. ಸರ್ವೆ ನಂ.36 ರ ಒಟ್ಟು ವಿಸ್ತೀರ್ಣ 4 ಎಕರೆ 19 ಗುಂಟೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಕ್ರಯ ಪತ್ರದಲ್ಲಿ ನಮೂದಾಗಿರುವ ಸರ್ವೇ ನಂ.36 ರ ಕ್ರಯದಾರರು ಯಾರು ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.36 ಕ್ಕೆ ಲಿಂಗಪ್ಪನವರ ಮಗ ಶಿವಮಲ್ಲಪ್ಪ ಮತ್ತು ಶಿವಮಲ್ಲಪ್ಪನವರ ಹೆಂಡತಿ ಜಯಮ್ಮ ರವರು ಖಾತೆದಾರಾಗಿರುತ್ತಾರೆ ಎಂದರೆ ಇರಬಹುದು. ನಾನು ದಾವಾ ಸಲ್ಲಿಸುವ ಸಮಯ ನನ್ನ ಕ್ರಯ ಪತ್ರದಲ್ಲಿ ನಮೂದಾಗಿರುವ ಸರ್ವೆ ನಂ.36 ರ ಖಾತೆದಾರರನ್ನು ಈ ದಾವೆಯ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ. ಸರ್ವೆ ನಂ.36 ರ ಖಾತೆಯೂ ಶಿವಮಲ್ಲಪ್ಪ ಮತ್ತು ಜಯಮ್ಮ ರವರ ಹೆಸರಿನಲ್ಲಿ ಖಾತೆ ಇರುವುದು ಗೊತ್ತಿದ್ದರೂ ಸಹ ನಾನು ಉದ್ದೇಶ ಪೂರ್ವಕವಾಗಿ ಅಶವರನ್ನು ನಾನು ಈ ದಾವೆಯ ಪಕ್ಷಕಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಕ್ರಯ ಪತ್ರದಲ್ಲಿ ನಮೂದಾಗಿರುವ ಗುರುಸಿದ್ಧಮ್ಮ ಉ ಸಿದ್ಧಮ್ಮ ರವರು ನಂಜುಂಡಯ್ಯ ನವರ ಹೆಂಡತಿ ಅಲ್ಲ ಎಂದರೆ ಸರಿಯಲ್ಲ. ಕ್ರಯ ಪತ್ರದಲ್ಲಿ ಗುರುಸಿದ್ಧಮ್ಮ ಉ ಸಿದ್ಧಮ್ಮ ರವರ ವಯಸ್ಸನ್ನು ಸುಮಾರು 25 ವರ್ಷ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ಒಂದು ಗುರುಸಿದ್ಧಮ್ಮ ಉ ಸಿದ್ಧಮ್ಮ ಈಗ ಜೀವಂತ ಇದ್ದಿದ್ದರೆ ಅವರಿಗೆ ಸುಮಾರು 74 ವರ್ಷವಯಸ್ಸಾಗುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಗುರುಸಿದ್ಧಮ್ಮ ಉ ಸಿದ್ಧಮ್ಮ ರವರು ಸುಮಾರು 14 ವರ್ಷಕ್ಕೆ ಮದುವೆಯಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದನ್ನು ಗುರುಸಿದ್ಧಮ್ಮ ಉ

ಸಿದ್ಧಮ್ಮ ರವರ ಯಜಮಾನರೇ ಬರೆಸಿರುತ್ತಾರೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿ ಮತ್ತು ಗುರುಸಿದ್ಧಮ್ಮ ಉ ಸಿದ್ಧಮ್ಮ ರವರಿಗೂ ತಾಯಿ ಮಗನ ಸಂಬಂಧ ಬರುವುದಿಲ್ಲ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/–**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**